ಅಧ್ಯಕ್ಷರು: ಶ್ರೀ ನಾರಾಯಣ ಸ್ವಾಮಿಯವರೆ, ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಶನಿವಾರದೊಳಗೆ ನಿಮಗೆ ಸರ್ಕಾರದಿಂದ ಉತ್ತರವನ್ನು ತರಿಸಿಕೊಡುತ್ತೇನೆ.

ರಾಜ್ಯದಲ್ಲಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ

90(952) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ವರ್ಷ ಹಾಗೂ ಈ ವರ್ಷ ಎಷ್ಟು ಹೊಸ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡಿರುವುದು; ವಿವರ ನೀಡುವುದು;

ಆ) ಈ ಕಾಲೇಜುಗಳಲ್ಲಿ ಯಾವ ಯಾವ ಕೋರ್ಸ್ ಪ್ರಾರಂಭಿಸಲು ಅನುಮತಿ ನೀಡಲಾಗಿದೆ; ಹಾಗೂ ಎಷ್ಟೆಷ್ಟು ಇಂಟೆಕ್ ಇರುವುದು ಮತ್ತು ಯಾವ ಯಾವ ಷರತ್ತುಗಳಿಗೆ ಒಳಪಟ್ಟು ಈ ಕಾಲೇಜು ಪ್ರಾರಂಭಿಸಲು ಅನುಮತಿ ನೀಡಲಾಗಿದೆ;

ಇ) ಮೂಲಭೂತ ಸೌಕರ್ಯ ಇಲ್ಲದೆ ಇದ್ದರೂ ಸಹ ಕೆಲವೊಂದು ಕಾಲೇಜುಗಳಿಗೆ ಅನುಮತಿ ನೀಡಿರುವ ಸಂಗತಿ ನಿಜವೇ;

ಈ) ಹಾಗಿದ್ದಲ್ಲಿ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವಾಗ, ಹೊಸ ಕಾಲೇಜುಗಳನ್ನು ಪ್ರಾರಂಭಿಸುವುದು ಅವಶ್ಯವಿಲ್ಲವೆಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಕಳೆದ ವರ್ಷ ಯಾವ ಯಾವ ಕಾಲೇಜುಗಳಲ್ಲಿ ಯಾವ ಯಾವ ಕೋರ್ಸ್‌ಗಳಲ್ಲಿ ಎಷ್ಟೆಷ್ಟು ಸ್ಥಳಗಳು ಖಾಲಿ ಇದ್ದವು; ವಿವರ ನೀಡುವುದು?

ಡಾ। ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) 1999-2000 - 07

2000-2001 - 06

ವಿವರಗಳು 1ನೇ ಮತ್ತು 2ನೇ ಅನುಬಂಧದಲ್ಲಿವೆ.

ಆ) ವಿವರಗಳು 1ನೇ ಮತ್ತು 2ನೇ ಅನುಬಂಧದಲ್ಲಿವೆ. ಎಐಸಿಟಿಇ ವಿಧಿಸಿರುವ ಸಾಮಾನ್ಯ ಷರತ್ತುಗಳಿಗೆ ಒಳಪಟ್ಟಿರುತ್ತದೆ.

ಇ) ಎಐಸಿಟಿಇ ನಿಗಧಿಪಡಿಸಿರುವ ಮಾರ್ಗಸೂತ್ರಗಳನ್ನು ಅವುಗಳು ಪೂರೈಸುತ್ತವೆ.

ಈ) ಮಾಹಿತಿ ತಂತ್ರಜ್ಞಾನದ ಕ್ಷಿಪ್ರ ಬೆಳವಣಿಗೆಯ ಪರಿಣಾಮದಿಂದ ರಾಜ್ಯದ ವಿವಿಧ ಭಾಗಗಳಲ್ಲಿ ನೂತನ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ ಅಗತ್ಯವಿದೆ ಎಂದು ನಿರ್ಧರಿಸಲಾಗಿದೆ.

ಉ) ವಿವರಗಳು 3ನೇ ಅನುಬಂಧದಲ್ಲಿವೆ.

ಅನುಬಂಧ - I

1999-2000ನೇ ಸಾಲಿನಲ್ಲಿ ಪ್ರಾರಂಭಿಸಲಾದ ಹೊಸ ಇಂಜಿನಿಯರಿಂಗ್ ಕಾಲೇಜುಗಳ ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಕೋರ್ಸ್‌ಗಳು	ಇಂಟೇಕ್ ವಿವರ
1	2	3	4
1.	ಈಸ್ಟ್ ಪಾಯಿಂಟ್ ಕಾಲೇಜು ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಬೆಂಗಳೂರು.	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಮೆಕ್ಯಾನಿಕಲ್ ಇಂಜಿನಿಯರಿಂಗ್	60
2.	ವುಮೆನ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಆನೇಕಲ್ ತಾಲ್ಲೂಕು, ಬೆಂಗಳೂರು ದಕ್ಷಿಣ.	1) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		2) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		3) ಟೆಲಿ-ಕಮ್ಯೂನಿಕೇಷನ್ ಇಂಜಿನಿಯರಿಂಗ್	60
		4) ಇನ್‌ಫರ್ಮೇಷನ್ ಸೈನ್ಸ್	60
3.	ಎ.ಎಂ.ಸಿ. ಕಾಲೇಜ್ ಆಫ್ ಇಂಜಿನಿಯರಿಂಗ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು.	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಮೆಕ್ಯಾನಿಕಲ್ ಇಂಜಿನಿಯರಿಂಗ್	60

1	2	3	4
4.	ಕೆ.ಎಸ್. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಕನಕಪುರ ರಸ್ತೆ, ಬೆಂಗಳೂರು.	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಮೆಕ್ಯಾನಿಕಲ್ ಇಂಜಿನಿಯರಿಂಗ್	60
5.	ಬಸವ ಕಲ್ಯಾಣ ಕಾಲೇಜ್ ಆಫ್ ಇಂಜಿನಿಯರಿಂಗ್, ಬಸವಕಲ್ಯಾಣ, ಬೀದರ್ ಜಿಲ್ಲೆ.	1) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		2) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		3) ಟೆಲಿ-ಕಮ್ಯೂನಿಕೇಷನ್ ಇಂಜಿನಿಯರಿಂಗ್	60
6.	ಎಸ್.ಜಿ.ಇ.ಸಿ.ಇ. ರೂರಲ್ ಕಾಲೇಜ್ ಆಫ್ ಇಂಜಿನಿಯರಿಂಗ್, ತಾರಿಹಾಳ್, ಹುಬ್ಬಳ್ಳಿ.	1) ಮೆಕ್ಯಾನಿಕಲ್ ಇಂಜಿನಿಯರಿಂಗ್	60
		2) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	40
		3) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	40
		4) ಇನ್ಸ್‌ಟ್ರುಮೆಂಟೇಷನ್ ಟೆಕ್ನಾಲಜಿ	40
7.	ಕೂರ್ಗ್ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಪೆಸಂಪೇಟ್.	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಟೆಲಿ-ಕಮ್ಯೂನಿಕೇಷನ್ ಇಂಜಿನಿಯರಿಂಗ್	60

ಅನುಬಂಧ - II

2000-2001ನೇ ಸಾಲಿನಲ್ಲಿ ಪ್ರಾರಂಭಿಸಲಾದ ಹೊಸ ಇಂಜಿನಿಯರಿಂಗ್ ಕಾಲೇಜುಗಳ ವಿವರ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಕೋರ್ಸ್‌ಗಳು	ಇಂಟೇಕ್ ವಿವರ
1	2	3	4
1.	ಎಟ್ರಿಯಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಆರ್.ಟಿ. ನಗರ, ಬೆಂಗಳೂರು	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಟೆಲಿ-ಕಮ್ಯೂನಿಕೇಷನ್ ಇಂಜಿನಿಯರಿಂಗ್	60
2.	ಪಿ.ಎ. ಕಾಲೇಜ್ ಆಫ್ ಇಂಜಿನಿಯರಿಂಗ್, ಕೈರಂಗಾಲಹಳ್ಳಿ, ಮಂಗಳೂರು	1) ಇನ್‌ಫರ್ಮೇಷನ್ ಸೈನ್ಸ್	60
		2) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		3) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		4) ಟೆಲಿ-ಕಮ್ಯೂನಿಕೇಷನ್ ಇಂಜಿನಿಯರಿಂಗ್	60
3.	ಆಚಾರ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಸೋಲದೇವನಹಳ್ಳಿ, ಬೆಂಗಳೂರು	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಇನ್‌ಫರ್ಮೇಷನ್ ಸೈನ್ಸ್	60

1	2	3	4
4.	ಆಕ್ಸ್‌ಫರ್ಡ್ ಕಾಲೇಜ್ ಆಫ್ ಇಂಜಿನಿಯರಿಂಗ್, ಹೊಸೂರು ರಸ್ತೆ, ಬೆಂಗಳೂರು.	1) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		2) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		3) ಇನ್‌ಫರ್ಮೇಷನ್ ಸೈನ್ಸ್	60
5.	ಸಿ.ಎಂ.ಆರ್. ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು.	1) ಇನ್‌ಫರ್ಮೇಷನ್ ಸೈನ್ಸ್	60
		2) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	60
		3) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		4) ಟೆಲಿ-ಕಮ್ಯೂನಿಕೇಷನ್ ಇಂಜಿನಿಯರಿಂಗ್	60
6.	ಬೆಂಗಳೂರು ಕಾಲೇಜ್ ಆಫ್ ಇಂಜಿನಿಯರಿಂಗ್, ಚಂದಾಪುರ, ಬೆಂಗಳೂರು.	1) ಮೆಕ್ಯಾನಿಕಲ್ ಇಂಜಿನಿಯರಿಂಗ್	60
		2) ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್	45
		3) ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್	60
		4) ಇನ್‌ಫರ್ಮೇಷನ್ ಸೈನ್ಸ್	45

Annexure - III

Statement showing the vacant seats in the Colleges after the completion of admission during the year 2000-2001

B.M.S. College of Engineering, Bangalore.	**Total Vacancy**
Transportation	8
Architectural Engineering	3
Medical Electronics	1
Printing Technology	7
Chemical Engineering	2
Mechanical Engineering	1
M.S. Ramaiah College of Engineering, Bangalore	**Total Vacancy**
Civil Engineering	12
Electrical and Electronics Engineering	5
Chemical Engineering	2
Architectural Engineering	2
Medical Electronics	2
R.V. College of Engineering, Bangalore	**Total Vacancy**
Civil Engineering	2
Electrical Engineering	5
Bangalore Institute of Technology, Bangalore	**Total Vacancy**
Civil Engineering	9
Architectural Engineering	2
Mechanical Engineering	6
Electrical and Electronics Engineering	6

Dayanand Sagar College of Engineering, Bangalore	**Total Vacancy**
Architectural Engineering	26
Civil Engineering	38
Mechanical Engineering	15
Electronics and Communication Engineering	7
Chemical Engineering	4
Industrial Production	4
Computer Science and Engineering	2
Information Science	1
Telecommunication	3
Instrumentation Technology	4
Medical Electronics	6
Dr. Ambedkar Institute of Technology, Bangalore	**Total Vacancy**
Electrical and Electronics Engineering	4
Civil Engineering	5
Sir M. Vishweswaraya Institute of Technology, Bangalore	
Mechanical Engineering	6
Electrical and Electronics Engineering	5
Sri Sidhartha Institute of Technology, Tumkur	**Total Vacancy**
Civil Engineering	28
Industrial Engineering and Management	7
Kalpataru Institute of Technology, Tiptur	**Total Vacancy**
Computer Science and Engineering	1
Electronics and Communication Engineering	5

Telecommunication	7
Mechanical Engineering	13
Golden Valley Education Society Institute of Technology	**Total Vacancy**
Computer Science and Engineering	1
Electronics and Communication Engineering	6
Electrical and Electronics Engineering	12
Mechanical Engineering	8
Mining Engineering	22
S.J.C. Institute of Technology, Chikkaballapur	**Total Vacancy**
Mechanical Engineering	2
Civil Engineering	10
Islamia Institute of Technology, Bangalore	**Total Vacancy**
Mechanical Engineering	9
Civil Engineering	3
Electrical and Electronics Engineering	7
Ghousia Engineering College, Ramanagaram	**Total Vacancy**
Electronics and Communication Engineering	3
Electrical and Electronics Engineering	1
Civil Engineering	34
Mechanical Engineering	27
M.V.J. College of Engineering, Bangalore	**Total Vacancy**
Industrial Engineering and Management	11
Information Science	9
Telecommunication	4

Chemical Engineering	8
Electronics and Communication Engineering	21
Electrical and Electronics Engineering	8
Mechanical Engineering	34
Civil Engineering	3
Computer Science and Engineering	13
H.M.S. Institute of Technology, Tumkur	**Total Vacancy**
Industrial Engineering and Management	23
J.S.S. Academy of Technical Education, Bangalore	**Total Vacancy**
Computer Science and Engineering	1
Electronics and Communication Engineering	4
Industrial Engineering and Managment	8
Instrumentation Technology	8
Sri Beimaiah Mahasasthana Institute of Technology -	**Total Vacancy**
Medical Electronics	10
Electronics and Communication Engineering	3
Computer Science and Engineering	4
Information Science	2
Vivekananda Institute of Technology Kengeri, Bangalore	**Total Vacancy**
Chemical Engineering	2
Revana Siddeswara Institute of Technology, Chokkana Halli	**Total Vacancy**
Medical Engineering	1
Electronics and Communication Engineering	1

Vemana Institute of Technology, Marasur, Anekal	**Total Vacancy**
Electronics and Communication Engineering	1
National Institute of Engineering, Mysore	**Total Vacancy**
Industrial Production	1
Sri Jayachamarajendra College of Engineering, Mysore	
Civil Engineering	1
Mechanical Engineering	3
Industrial Production	3
Polymer Technology	2
P.L.S. College of Engineering, Mandya	**Total Vancacy**
Civil Engineering	5
Electrical and Electronics Engineering	1
Industrial Production	1
Environmental Engineering	5
Malnad College of Engineering, Hassan	**Total Vacancy**
Mechanical Engineering	2
Industrial Production	13
Automobile Engineering	16
Civil Engineering	12
Architectural Engineering	14
Bahubali College of Engineering, Sravanabelgoal	**Total Vacancy**
Computer Science and Engineering	2
Electronics and Communication Engineering	6
Mechanical Engineering	21
Industrial Production	34

..... College of Engineering, Mysore	Total Vacancy
Computer Science and Engineering	1
Electronics and Communication Engineering	1
Mechanical Engineering	5
Environmental Engineering	25
Information Science	1

B.V.B. College of Engineering & Technology, Hubli	Total Vacancy
Automobile Engineering	11
Instrumentation Technology	2
Civil Engineering	4
Architectural Engineering	20
Industrial Production	11

Basaweswara Engineering College, Bagalkot	Total Vacancy
Instrumentation Technology	9
Automobile Engineering	14
Industrial Production	14
Electronics and Communication Engineering	7
Mechanical Engineering	6
Civil Engineering	44
Information Science	1

K.L.E. Society Engineering College, Belgaum	Total Vacancy
Telecommunication	3
Civil Engineering	15

Mechanical Engineering	2
Industrial Production	12
Chemical Engineering	13
Bio-Medical Engineering	2
K.L.S. Gogte Institute of Technology, Belgaum	**Total Vacancy**
Mechanical Engineering	5
B.L.D.E.A's College of Engineering & Technology, Bijapur	**Total Vacancy**
Civil Engineering	43
Mechanical Engineering	3
Industrial Production	10
Automobile Engineering	14
Architectural Engineering	34
R.T.E. Society Rural Engineering College, Hulkoti	**Total Vacancy**
Mechanical Engineering	2
Textile Technology	5
Computer Science and Engineering	1
S.T.J. Institute of Technology, Ranebennur	**Total Vancay**
Civil Engineering	48
Mechanical Engineering	8
Electrical and Electronics Engineering	3
S.N.J.P.S.N.M. Rural Engineering College, Nidasosi	**Total Vacancy**
Eletrical and Electronics Engineering	31
Electronics and Communication Engineering	4
Mechanical Engineering	14

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ: ಮಾನ್ಯ ಅಧ್ಯಕ್ಷರೆ, 1999-2000ನೇ ಸಾಲಿನಲ್ಲಿ 7 ಹಾಗೂ 2000-2001ನೇ ಸಾಲಿನಲ್ಲಿ 6 ಹೀಗೆ ಒಟ್ಟು 13 ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡಲು ಅನುಮತಿ ನೀಡಿದ್ದು ಅದರಲ್ಲಿ ಬೆಂಗಳೂರಿಗೆ 10 ಕಾಲೇಜುಗಳನ್ನು ಪ್ರಾರಂಭ ಮಾಡಲು ಅನುಮತಿ ಕೊಟ್ಟಿದ್ದಾರೆ ಮತ್ತು ಉಳಿದ ಮೂರು ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ರಾಜ್ಯದ ಬೇರೆ ಬೇರೆ ಕಡೆಗೆ ಅನುಮತಿ ಕೊಟ್ಟಿದ್ದಾರೆ. ಹಾಗಾದರೆ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಕೇವಲ ಬೆಂಗಳೂರಿಗೆ ಮಾತ್ರ ಅನುಮತಿ ಕೊಡಬೇಕೆಂದು ಸರ್ಕಾರದಲ್ಲಿ ನಿಯಮ ಮಾಡಿಕೊಂಡಿದ್ದಾರೆಯೇ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಬೇಕು ಎನ್ನುವುದರ ಬಗ್ಗೆ ಸರ್ಕಾರದ ಒಂದು ನಿಯಮವಿದೆ. ಇಂಜಿನಿಯರಿಂಗ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಉತ್ತರ ಕರ್ನಾಟಕದಿಂದ ಯಾವುದೇ ಅರ್ಜಿಗಳು ಬಂದಿಲ್ಲವೇ? ಬಂದಿದ್ದರೆ ಅನುಮತಿ ಏಕೆ ಕೊಟ್ಟಿಲ್ಲವೆಂಬುದನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಡಾ। ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡಲು ಅನುಮತಿಯನ್ನು ಆಲ್ ಇಂಡಿಯಾ ಟೆಕ್ನಿಕಲ್ ಎಜ್ಯುಕೇಷನ್ ಕೌನ್ಸಿಲ್‌ನ ನಿಯಮದ ಅನುಸಾರವಾಗಿ ಕೊಡುವಂಥದ್ದಾಗಿದೆ. 1999-2000ನೇ ಸಾಲಿನಲ್ಲಿ 7 ಮತ್ತು 2000-2001ರ ಸಾಲಿನಲ್ಲಿ 6 ಇಂಜಿನಿಯರಿಂಗ್ ಕಾಲೇಜುಗಳಿಗೆ ಸರ್ಕಾರ ಮಂಜೂರಾತಿ ಕೊಟ್ಟಿದೆ. ನಾವು ಮಂಜೂರಾತಿ ಕೊಡುವುದಕ್ಕೆ ಮುಂಚೆ ಇಷ್ಟು ಕಾಲೇಜುಗಳಿಗೆ ಅನುಮತಿ ಕೊಡುತ್ತೇವೆ, ಸಂಬಂಧಪಟ್ಟವರು ಅರ್ಜಿ ಹಾಕಬಹುದೆಂದು ಹೇಳುವಂಥ ಪದ್ಧತಿ ಸರ್ಕಾರದಲ್ಲಿ ಇಲ್ಲ. ಆಲ್ ಇಂಡಿಯಾ ಟೆಕ್ನಿಕಲ್ ಎಜ್ಯುಕೇಷನ್ ಕೌನ್ಸಿಲ್‌ನವರು ಜಾಹೀರಾತು ಮಾಡಿದ ಮೇಲೆ ಅವರಿಗೆ ಯಾರು ಅರ್ಜಿ ಹಾಕಿರುತ್ತಾರೆ ಅವರಿಗೆ ಮಂಜೂರಾತಿ ಕೊಡುವಂಥ ನಿಯಮ ಇದೆ. ಕಾಲೇಜು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡುವುದಕ್ಕೆ ಮೊದಲು - 'ಇಂತಿಷ್ಟು ಜಮೀನು ಇರಬೇಕು, ಅಲ್ಲಿ ಕಟ್ಟಡ ಇರಬೇಕು, ಮತ್ತು ಅವರ ಹತ್ತಿರ ಹಣ ಇರಬೇಕು' ಎನ್ನುವಂಥ ನಿಯಮಗಳನ್ನು ಎ.ಐ.ಟಿ.ಇ.ಸಿ.ಯವರು ಫಿಕ್ಸ್ ಮಾಡಿದ್ದಾರೆ. ಆ ಒಂದು ಆಧಾರದ ಮೇಲೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದವರು ಲೋಕಲ್ ಎನ್‌ಕ್ವೈರಿ ಕಮಿಟಿಯನ್ನು ಕಳುಹಿಸಿ ರಿಪೋರ್ಟ್ ತರಿಸಿಕೊಂಡು ಸಿಂಡಿಕೇಟ್‌ನಿಂದ ಅದನ್ನು ಸರ್ಕಾರಕ್ಕೆ ರೆಕಮಂಡ್ ಮಾಡುತ್ತಾರೆ. ಈ ರೆಕಮೆಂಡೇಷನ್ನಿನ ಆಧಾರದ ಮೇಲೆ ಅದನ್ನು ಸರ್ಕಾರ ಪರಿಗಣಿಸಿ ಕೊಡುತ್ತದೆ. ಉತ್ತರ ಕರ್ನಾಟಕದ ಭಾಗದಿಂದ ಅರ್ಜಿಗಳು ಬಂದಿಲ್ಲವೇ ಎಂದು ಮಾನ್ಯ ಸದಸ್ಯರು ಕೇಳಿದರು. ಅರ್ಜಿಗಳು ಇದ್ದರೆ ಅಲ್ಲೂ ಕೂಡ ಕೊಟ್ಟಿದ್ದೇವೆ. 2001-2002ನೇ ಸಾಲಿನಲ್ಲಿ ಒಟ್ಟು 45 ಇಂಜಿನಿಯರಿಂಗ್ ಕಾಲೇಜುಗಳಿಗೆ ಎನ್.ಓ.ಸಿ. ಕೊಟ್ಟಿದ್ದೇವೆ. ಅದರಲ್ಲಿ 16-17 ಕಾಲೇಜುಗಳನ್ನು ಉತ್ತರ ಕರ್ನಾಟಕದ ಭಾಗಕ್ಕೆ ಕೂಡ ಕೊಟ್ಟಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ನೀವು ಕೇವಲ ಶಿಫಾರಸ್ಸು ಮಾಡುವುದು ಅಷ್ಟೇ ಎಂದು ನಮಗೂ ಕೂಡ ಗೊತ್ತಿದೆ. ಆದರೆ ದುರ್ದೈವದಿಂದ ಕೊಟ್ಟಿರತಕ್ಕಂಥ 13 ಕಾಲೇಜುಗಳಲ್ಲಿ 10 ಕಾಲೇಜುಗಳನ್ನು ಬೆಂಗಳೂರಿಗೇ ಕೊಟ್ಟಿದ್ದೀರಿ. ಅದೇ

ರೀತಿ ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ರಾಜೀವ್‌ಗಾಂಧಿ ಯೂನಿವರ್ಸಿಟಿಯಿಂದ ಯಾವ ಸಂಸ್ಥೆಗೆ ಕೊಡಬೇಕೆಂದು ರೆಕಮಂಡ್ ಮಾಡಿದ್ದರೋ ಅಲ್ಲಿಗೆ ಪರ್ಮಿಷನ್ ಕೊಡಲಿಲ್ಲ. ನಮ್ಮಗದುಗಿನ ತೋಂಟದಾರ್ಯ ಶಿಕ್ಷಣ ಸಂಸ್ಥೆಗೆ ರೆಕಮಂಡ್ ಮಾಡಿದ್ದರು, ಆದರೂ ಕೊಟ್ಟಿಲ್ಲ. ಏಕೆ ಕೊಡಲಿಲ್ಲ? ಉತ್ತರ ಕರ್ನಾಟಕದಿಂದ ಯಾವ ಅರ್ಜಿಯೂ ಇಲ್ಲವೆಂದು ಹೇಳುತ್ತೀರಿ. ಈ ಕಾರಣದಿಂದ ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯ ಮಾಡುತ್ತಿದ್ದೀರಿ. ದಯವಿಟ್ಟು ಅದನ್ನು ಸರಿಪಡಿಸುತ್ತೀರಾ ಎನ್ನುವುದನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಡಾ। ಜಿ. ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕವನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಮಾಡಬೇಕೆನ್ನುವಂಥ ಕಮಿಟ್‌ಮೆಂಟ್ ನಮ್ಮ ಸರ್ಕಾರದಲ್ಲಿದೆ. ಹೊಸದಾಗಿ ಕಾಲೇಜುಗಳನ್ನು ಮಂಜೂರು ಮಾಡುವಂಥ ಸಂದರ್ಭದಲ್ಲಿ ಅದನ್ನು ಗಮನದಲ್ಲಿಟ್ಟುಕೊಂಡೇ ಮಾಡಿದ್ದೇವೆ. ಕಾಲೇಜುಗಳನ್ನು ಕೊಡುತಕ್ಕಂಥ ಸಂದರ್ಭದಲ್ಲಿ ಎ.ಐ.ಟಿ.ಇ.ಸಿ. ನಿಯಮ ಇರಬಹುದು, ಮೆಡಿಕಲ್ ಕೌನ್ಸಿಲ್‌ನ ನಿಯಮ ಇರಬಹುದು, ಈ ನಿಯಮವನ್ನು ಪರಿಪಾಲನೆ ಮಾಡತಕ್ಕಂಥವರು ಅಥವಾ ಆ ನಿಯಮವನ್ನು ಅನುಸರಣೆ ಮಾಡಿ ಆ ಚೌಕಟ್ಟಿನಲ್ಲಿ ಬರತಕ್ಕಂಥವರಿಗೆ ಖಂಡಿತವಾಗಿ ನಾವು ಎನ್.ಒ.ಸಿ. ಕೊಟ್ಟಿದ್ದೇವೆ. ಕೆಲವೊಂದು ಕಾರಣಕ್ಕಾಗಿ ಅಂದರೆ ಕಾಲೇಜು ಪ್ರಾರಂಭ ಮಾಡಲಿಕ್ಕೆ ಅರ್ಜಿ ಕೊಟ್ಟವರು 5 ಕೋಟಿ ರೂಪಾಯಿಗಳನ್ನು ಇಡಬೇಕು, ಅಥವಾ 5 ಎಕರೆ, 10 ಎಕರೆ ಜಮೀನು ಇಡಬೇಕೆನ್ನುವ ನಿಯಮವನ್ನು ಕೆಲವು ಕಾಲೇಜುಗಳಿಂದ ಬಂದಂಥ ಅರ್ಜಿಗಳು ಅದನ್ನು ಪಾಲಿಸಿಲ್ಲ. ಮತ್ತೆ ಅದನ್ನು ಮಾಡಿದ ನಂತರ ಪರಿಗಣಿಸುತ್ತೇವೆಂಬ ಕಾಗದವನ್ನು ಈಗಾಗಲೇ ಸರ್ಕಾರ ಬರೆದಿದೆ. ಆ ಒಂದು ಚೌಕಟ್ಟಿಗೆ ಬಂದನಂತರ ಅವರ ಅರ್ಜಿಗಳನ್ನು ಕೂಡ ಕನ್‌ಸಿಡರ್ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಗದಗ್‌ನ ತೋಂಟದಾರ್ಯ ಎಜುಕೇಷನ್ ಸೊಸೈಟಿಗೆ ರಾಜೀವ್‌ಗಾಂಧಿ ಯೂನಿವರ್ಸಿಟಿಯವರೇನು ರೆಕಮೆಂಡ್ ಮಾಡಿದ್ದಾರೆ, ಅದನ್ನಾದರೂ ಕೊಡುತ್ತೀರಾ?

ಡಾ। ಜಿ. ಪರಮೇಶ್ವರ್: ಯಾವುದನ್ನು ಯೂನಿವರ್ಸಿಟಿಯವರು ರೆಕಮೆಂಡ್ ಮಾಡಿದ್ದಾರೆಯೋ, ಆ ರೆಕಮೆಂಡೇಷನ್ನಿನ ಆಧಾರದ ಮೇಲೆ ಖಂಡಿತವಾಗಿಯೂ ಕನ್‌ಸಿಡರ್ ಮಾಡುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ನಮಗೆ ಎನ್.ಓ.ಸಿ. ಕೊಟ್ಟರೆ ಸಾಕು.

ಕಮಲಾಪುರ ಕ್ಷೇತ್ರದ ಹಾಗೂ ತಾಂಡಾಗಳಲ್ಲಿ ನೀರಿನ ಸೌಲಭ್ಯ ಒದಗಿಸುವುದು

100(869) ಶ್ರೀ ರೇವೂನಾಯಕ್ ಬೆಳಮಗಿ (ಕಮಲಾಪುರ): ಮಾನ್ಯ ಗ್ರಾಮೀಣಾ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?